0401/0801

IV Semester 3 Year LL.B./VIII Semester 5 Year B.A. LL.B./B.B.A. LL.B. Examination, June/July 2017
PUBLIC INTERNATIONAL LAW

Duration : 3 Hours | Max. Marks : 100

Instructions: 1. Answer Q.No. **9** and **any five** of the **remaining** questions.
2. Q.No. **9** carries **20** marks and the **remaining** questions carry **16** marks **each**.
3. Answer should be written either in **English** or in **Kannada** completely.

Q. No. 1. Define International law. Explain various theories regarding basis of International law. Marks : 16

ಅಂತರಾಷ್ಟ್ರೀಯ ಕಾನೂನನ್ನು ಪರಿಭಾಷಿಸಿರಿ. ಅಂತರಾಷ್ಟ್ರೀಯ ಕಾನೂನಿನ ತಳಹದಿಗೆ ಸಂಬಂಧಿಸಿದ ವಿವಿಧ ಸಿದ್ಧಾಂತಗಳನ್ನು ವಿವರಿಸಿ.

Q. No. 2. Explain the difference between Municipal Law and International Law. Marks : 16

ರಾಜ್ಯ ಕಾನೂನು ಮತ್ತು ಅಂತರಾಷ್ಟ್ರೀಯ ಕಾನೂನಿನ ವ್ಯತ್ಯಾಸವನ್ನು ವಿವರಿಸಿ.

Q. No. 3. "A state exercises jurisdiction over property, person, acts and events occurring within its territory". Examine the exceptions to this rule. Marks : 16

"ಒಂದು ರಾಷ್ಟ್ರವು ತನ್ನ ಭೌಗೋಳಿಕ ಕ್ಷೇತ್ರದಲ್ಲಿರುವ ಆಸ್ತಿ, ವ್ಯಕ್ತಿಗಳು, ಕೃತ್ಯಗಳು ಹಾಗೂ ಘಟನೆಗಳ ಬಗ್ಗೆ ತನ್ನ ನ್ಯಾಯಾಧಿಕಾರವನ್ನು ಚಲಾಯಿಸುತ್ತದೆ" ಈ ಹೇಳಿಕೆಗಿರುವ ಅಪವಾದಗಳನ್ನು ಪರಿಶೀಲಿಸಿ.

Q. No. 4. Discuss the jurisdiction of maritime state over coastal waters. Marks : 16

ಕಡಲತೀರದ ರಾಷ್ಟ್ರಗಳಿಗೆ ಕಡಲ ತೀರದ ಸಮುದ್ರದ ಮೇಲಿರುವ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಚರ್ಚಿಸಿ.

Q. No. 5. Narrate the importance of treaty in International law. Explain various steps in conclusion of an International treaty. Marks : 16

"ಒಪ್ಪಂದ"ದ ಪ್ರಾಮುಖ್ಯವನ್ನು ಅಂತರಾಷ್ಟ್ರೀಯ ಕಾನೂನಿನಡಿಯಲ್ಲಿ ವರ್ಣಿಸಿ. ಅಂತರಾಷ್ಟ್ರೀಯ ಒಪ್ಪಂದ ಏರ್ಪಡುವಾಗ ಕಾಣುವ ವಿವಿಧ ಹಂತಗಳನ್ನು ವಿವರಿಸಿ.

P.T.O.

Q. No. 6. Explain the privileges and immunities of diplomatic envoys. Marks : 16

ರಾಯಭಾರಿಗಳ ಸವಲತ್ತುಗಳು ಹಾಗೂ ಉನ್ಮುಕ್ತಿಗಳನ್ನು ವಿವರಿಸಿ.

Q. No. 7. Explain the powers and functions of the General Assembly of the United Nations. Marks : 16

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

Q. No. 8. Write short note on **any two** of the following : Marks : 16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Dualism.
ದ್ವಿತ್ವವಾದ.

b) Nottebohm's case.
ನಾಟ್ಟೆಬಾಮನ ಪ್ರಕರಣ.

c) Calvo clause.
ಕಾಲ್ವೋ ಖಂಡ.

Q. No. 9. Solve **any two** of the following problems : Marks : 10×2=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

a) Under the dictatorial regime of 'X', his subordinate officer 'Y' committed attrocities upon Tamilians. The charge against him was that he was responsible for the murders of lakhs of Tamilians and for in human treatment towards them. The spies of newly formed "Eelam" state were after him for a long time, but he was running from one country to another for escaping arrest and trail. Ultimately Eelam spies caught him in "Purvanchal". But on account of the fear that the government of "Purvanchal" might not extradite him for prosecution for the commission of war crimes, the Eelam spies, abducted him from 'Purvanchal' to Eelam in an irregular way. Now Eelam wants to prosecute and punish for committing war crimes. State of Eelam was established only after the alleged commission of war crimes by 'Y'. Decide.

'X' ಎಂಬ ಸರ್ವಾಧಿಕಾರಿಯ ಆಡಳಿತದಲ್ಲಿ ಆತನ ಅಧೀನ ಅಧಿಕಾರಿಯಾಗಿದ್ದ 'Y' ಎಂಬಾತನು ತಮಿಳರ ಮೇಲೆ ದೌರ್ಜನ್ಯ ಎಸಗಿದನು. ಅವನ ವಿರುದ್ಧವಿದ್ದ ಆರೋಪವೆಂದರೆ ಲಕ್ಷಾಂತರ ತಮಿಳರ ಮಾರಣಹೋಮ ಹಾಗೂ ಅಮಾನವೀಯ ಕೃತ್ಯಗಳಿಗೆ 'Y'ನೇ ಹೊಣೆಗಾರ ಎಂಬುದಾಗಿತ್ತು. ಹೊಸದಾಗಿ ಸ್ಥಾಪನೆಗೊಂಡ 'ಈಳಂ' ದೇಶದ ಗೂಢಚಾರರು ಈತನ ಬೆಂಬೆತ್ತಿದರೂ, ಈತನು, ಬಂಧನ ಹಾಗೂ ವಿಚಾರಣೆಯ ಭೀತಿಯಿಂದ, ಬೇರೆ ಬೇರೆ ರಾಷ್ಟ್ರಗಳಿಗೆ ಪಲಾಯನ ಮಾಡುತ್ತಲೇ ಇದ್ದನು. ಕಡೆಗೂ ಈ ಗೂಢಚಾರರು ಈತನನ್ನು ''ಪೂರ್ವಾಂಚಲ'' ರಾಷ್ಟ್ರದಲ್ಲಿ ಪತ್ತೆ ಮಾಡಿ ಹಿಡಿದರು.

ಆದರೆ ಪೂರ್ವಾಂಚಲ ರಾಷ್ಟ್ರವು ಈತನನ್ನು 'ಈಳಂ' ದೇಶದಲ್ಲಿ ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸಲು ಪ್ರತ್ಯರ್ಪಣೆ ಮಾಡುವುದಿಲ್ಲ ಎಂಬ ಭೀತಿಯಿಂದ ಈ ಗೂಢಚಾರರು ಈತನನ್ನು ''ಪೂರ್ವಾಂಚಲ''ದಿಂದ ''ಈಳಂ''ಗೆ ಅಪಹರಿಸಿಕೊಂಡು ಬಂದರು. ಈಗ ಈಳಂ ರಾಷ್ಟ್ರವು Y ಯನ್ನು ವಿಚಾರಣೆಗೆ ಗುರಿಮಾಡಿ ಯುದ್ಧಾಪರಾಧಗಳಿಗಾಗಿ ಶಿಕ್ಷಿಸಲು ಬಯಸುತ್ತದೆ. ಈಳಂ ದೇಶವು 'Y' ಆರೋಪಿತ ಯುದ್ಧಾಪರಾಧಗಳನ್ನು ಎಸಗಿದ ನಂತರವಷ್ಟೇ ಸ್ಥಾಪನೆಗೊಂಡಿದೆ. ನಿರ್ಣಯಿಸಿ.

b) State 'T' got 'S' extradited from State 'R' on the ground that he had fled to 'R' after murdering a fellow servant in a ship belonging to 'T'. In 'T' , S is now being tried not for murder but for causing grievous hurt to a fellow servant.

Is it justifiable on the part of 'T' to do so ? Decide.

'T' ಎಂಬ ರಾಷ್ಟ್ರವು ತನ್ನ ದೇಶದ ಹಡಗಿನಲ್ಲಿ 'S' ಎಂಬ ವ್ಯಕ್ತಿಯು ''ತನ್ನ ಸಹೋದ್ಯೋಗಿಯೊಬ್ಬನನ್ನು ಕೊಲೆಮಾಡಿದ್ದಾನೆ'' ಎಂಬ ಕಾರಣದ ಮೇಲೆ, 'R' ಎಂಬ ದೇಶಕ್ಕೆ ಪಲಾಯನಗೈದಿದ್ದ 'S' ನನ್ನು ಪ್ರತ್ಯರ್ಪಣೆ ಪಡೆದು ತದನಂತರ 'S' ನ ಮೇಲೆ ''ತನ್ನ ಸಹೋದ್ಯೋಗಿಯೊಬ್ಬನಿಗೆ ಗಂಭೀರ ಗಾಯಗಳನ್ನು ಉಂಟುಮಾಡಿದ್ದಾನೆ'' ಎಂಬ ಕಾರಣದ ಮೇಲೆ ಮಾತ್ರಾ ವಿಚಾರಣೆ ನಡೆಸಲು ನಿರ್ಧರಿಸಿದ್ದು, ಕೊಲೆ ಆರೋಪದ ಆತನ ವಿಚಾರಣೆ ನಡೆಸುತ್ತಿಲ್ಲ. 'T' ರಾಷ್ಟ್ರದ ಈ ಕ್ರಮವು ಸಮರ್ಥನೀಯವೇ ? ನಿರ್ಣಯಿಸಿ.

c) A and B, the two cricket players of England are included in English cricket team scheduled to visit India between November 2016 and February 2016 to play six cricket matches in different places in India. The two players have played some cricket matches in "Bantuland" which is still practising the policy of apartheid. The Government of India

is a party to the "Gleneagles Accord" entered into by the member countries of the Commonwealth wherein they affirmed their full support for the international campaign against apartheid.

Civil Rights Vigilance Committee, a N.G.O. questions the decision of the Government of India to allow the English cricket team including these two players to play cricket matches in India. Decide.

ನವೆಂಬರ್ 2016 ರಿಂದ ಫೆಬ್ರವರಿ 2017 ರವರೆಗೆ ಭಾರತದ ವಿವಿಧ ಸ್ಥಳಗಳಲ್ಲಿ 6 ಕ್ರಿಕೆಟ್ ಪಂದ್ಯಾಟಗಳನ್ನು ಆಡಲು ಭಾರತಕ್ಕೆ ಆಗಮಿಸುತ್ತಿರುವ ಆಂಗ್ಲ ಕ್ರಿಕೆಟ್ ತಂಡದಲ್ಲಿ 'A' ಹಾಗೂ 'B' ಎಂಬ ಕ್ರೀಡಾಳುಗಳಿದ್ದು, ಈ ಈರ್ವರು ಈಗಲೂ "ವರ್ಣಭೇದ" ನೀತಿಯನ್ನು ಅನುಸರಿಸುತ್ತಿರುವ ಬಂಟುಲ್ಯಾಂಡ್ ಎಂಬ ದೇಶದಲ್ಲಿ ಕೆಲವು ಕ್ರಿಕೆಟ್ ಪಂದ್ಯಗಳನ್ನು ಆಡಿರುತ್ತಾರೆ. ಭಾರತ ಸರ್ಕಾರವು ಕಾಮನ್‌ವೆಲ್ತ್ ರಾಷ್ಟ್ರಗಳು ಮಾಡಿಕೊಂಡಿರುವ ಗ್ಲೆನೇಗಲ್ ಒಪ್ಪಂದದ ಪಕ್ಷಕಾರವಾಗಿದ್ದು, ಈ ಒಪ್ಪಂದದಲ್ಲಿ ಪಕ್ಷಕಾರ ದೇಶಗಳು ವರ್ಣಭೇದ ನೀತಿಯ ವಿರುದ್ಧದ ಅಂತರಾಷ್ಟ್ರೀಯ ಪ್ರಚಾರಕ್ಕೆ ಸಂಪೂರ್ಣ ಬೆಂಬಲವನ್ನು ದೃಢಪಡಿಸಿವೆ. ನಾಗರಿಕ ಹಕ್ಕುಗಳ ವಿಚಕ್ಷಣಾ ಸಮಿತಿ ಎಂಬ ಸರ್ಕಾರೇತರ ಸಂಸ್ಥೆಯು ಭಾರತ ಸರ್ಕಾರವು ಈ ಇಬ್ಬರು ಆಟಗಾರರನ್ನೊಳಗೊಂಡ ಆಂಗ್ಲ ಕ್ರಿಕೆಟ್ ತಂಡಕ್ಕೆ ಭಾರತದಲ್ಲಿ ಕ್ರಿಕೆಟ್ ಪಂದ್ಯಾಟಗಳನ್ನಾಡಲು ಅನುಮತಿ ನೀಡಿದ್ದನ್ನು ಪ್ರಶ್ನಿಸುತ್ತಿದೆ. ನಿರ್ಣಯಿಸಿ.